**CW : 1**

PW : 1

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.499/2023

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀಮತಿ ಆಶಾ ಶಂಕರ ಭಂಡಾರಿ |
| ಗಂಡನ ಹೆಸರು | : | ಶಂಕರ ಭಂಡಾರಿ |
| ಪ್ರಾಯ | : | 57 ವರ್ಷ |
| ಉದ್ಯೋಗ | | ಕೃಷಿ |
| ವಾಸಸ್ಥಳ | : | ಕುರಿಯ ಗ್ರಾಮ |

ದಿನಾಂಕ:**05.02.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

1 ನೇ ಆರೋಪಿ ನನ್ನ ತಮ್ಮ. ಚಾಸಾ-2 ನನ್ನ ಗಂಡ. ಚಾಸಾ-3 ನಮ್ಮ ಕೆಲಸದವರು. ದಿ.27-12-22 ರಂದು ಮದ್ಯಾಹ್ನ 3.00 ಗಂಟೆ ಸಮಯದಲ್ಲಿ ಡಿಂಬ್ರಿ ಮನೆ, ಕರಿಯ ಗ್ರಾಮದ ಸರ್ವೆ ನಂ. 152/2 ನನಗೆ ಸೇರಿದ ಜಾಗದಲ್ಲಿ ಯಾರೋ ಕೆಲಸ ಮಾಡುತ್ತಿರುವುದು ಕಂಡುಬಂತು. ಆಗ ನಾನು ತೋಟಕ್ಕೆ ಹೋಗಿ ನೋಡಿದಾಗ ನನ್ನ ತೋಟದಲ್ಲಿ 1 ನೇ ಆರೋಪಿ ಮತ್ತು ಅವನ ಕೆಲಸದವರಾದ ವಿನಯ್ ಮತ್ತು ಸುಂದರ ಎನ್ನುವವರು ಬೇಲಿ ಹಾಕಲು ಪ್ರಯತ್ನಿಸುತ್ತಿದ್ದರು. ಅದನ್ನು ನಾನು ಪ್ರಶ್ನೆ ಮಾಡಿದಾಗ 1 ನೇ ಆರೋಪಿ ನನ್ನನ್ನು ಉದ್ದೇಶಿಸಿ ರಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಈ ಜಾಗದಲ್ಲಿ ನಿನಗೆ ಏನು ಹಕ್ಕು ಇದೆ , ನಿನಗೆ ನನ್ನ ಇನ್ನೊಂದು ಮುಖವನ್ನು ತೋರಿಸುತ್ತೇನೆ , ಇಲ್ಲಿಗೆ ಇನ್ನೊಮ್ಮೆ ಬಂದರೆ ನಿನ್ನನ್ನು ಮತ್ತು ನಿನ್ನ ಕುಟುಂಬದವರನ್ನು ಕೊಲ್ಲದೆ ಬಿಡುವುದಿಲ್ಲ ಎಂದು ಜೀವಬೆದರಿಕೆ ಹಾಕುತ್ತಾ ಕಾಲಿನಿಂದ ನನ್ನ ಹೊಟ್ಟೆಗೆ ತುಳಿದು ನೆಲಕ್ಕೆ ದೂಡಿದನು. ನಾನು ಬಿದ್ದ ನಂತರ ನನ್ನ ಬೆನ್ನಿಗೆ, ಬುಜಕ್ಕೆ ಮತ್ತು ಕುತ್ತಿಗೆಗೆ ತುಳಿದು ನಾನು ತೊಟ್ಟಿದ್ದ ನೈಟಿಯನ್ನು ಹಿಡಿದು ಎಳೆದು ಹರಿದು ಮಾನಭಂಗವುಂಟುಮಾಡಿರುತ್ತಾನೆ. ಆಗ ನಾನು ಜೋರಾಗಿ ಚೀರಿದಾಗ ಮನೆಯಲ್ಲಿದ್ದ ನನ್ನ ಗಂಡ ತೋಟದ ಕಡೆ ಓಡಿ ಬರುತ್ತಿರುವುದನ್ನು ನೋಡಿ 1 ನೇ ಆರೋಪಿ ಹಾಗೂ ಅವನ ಕೆಲಸದವರು ಮೂವರು ಸೇರಿ ಮತ್ತೆ ಅವಾಚ್ಯ ಶಬ್ದಗಳಿಂದ ಬೈದು ನನಗೆ ಮತ್ತು ನನ್ನ ಗಂಡನಿಗೆ ಇಲ್ಲಿಗೆ ಬಂದರೆ ಮುಂದೆ ಕೊಲ್ಲದೆ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿರುತ್ತಾರೆ.

ನನಗೆ ನನ್ನ ಎದೆಯ ಹತ್ತಿರ 1 ನೆ ಆರೋಪಿ ಹಲ್ಲೆ ಮಾಡಿದ ಕಾರಣ ತರಚಿದ ಗಾಯ ಮತ್ತು ಕುತ್ತಿಗೆಯಲ್ಲಿ ಊತದ ಗಾಯ ಆಗಿತ್ತು. ನನ್ನ ಗಂಡ ಹಾಗೂ ಚಾಸಾ-3 ನನ್ನನ್ನು ಉಪಚರಿಸಿ ಮನೆಗೆ ಕರೆದುಕೊಂಡು ಹೋದರು. ನಂತರ ನನ್ನ ಗಂಡ ನನ್ನನ್ನು ಕಾರಿನಲ್ಲಿ ಆದರ್ಶ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದ್ದಾರೆ. ಅಲ್ಲಿ ನನ್ನನ್ನು ವೈದ್ಯರು ಪರೀಕ್ಷೆ ಮಾಡಿ ಒಳರೋಗಿಯನ್ನಾಗಿ ಸೇರಿಸಿಕೊಂಡು ಚಿಕಿತ್ಸೆ ಕೊಟ್ಟಿದ್ದಾರೆ. ಆಸ್ಪತ್ರೆಯಲ್ಲಿ ಸಂಜೆ 7.30 ರ ಸಮಯದಲ್ಲಿ ಬಂದು ನನ್ನ ಹೇಳಿಕೆ ಪಡೆದಿದ್ದಾರೆ. ಸಾಕ್ಷಿಯು ಹೇಳಿಕೆಯನ್ನು ಹಾಗೂ ಅದರಲ್ಲಿನ ತಮ್ಮ ಸಹಿಯನ್ನು ಗುರುತಿಸಿದ್ದು ಹೇಳಿಕೆಯನ್ನು ನಿಪಿ1 ಎಂದು ಸಹಿಯನ್ನು 1 ಎ ಎಂದು ಗುರುತಿಸಲಾಯಿತು.

ದಿ. 29-12-2022 ರಂದು ಮ 1.30 ರ ಸಮಯದಲ್ಲಿ ಸಂಪ್ಯದ ಪೋ ಠಾಣಾಧಿಕಾರಿಯವರು ಕೃತ್ಯ ನಡೆದ ಜಾಗಕ್ಕೆ ಹೋಗಿ ಅಲ್ಲಿ ಮಹಜರು ಮಾಡಿದ್ದು ಆ ಸಮಯದಲ್ಲಿ ನಾನು ನನ್ನ ಹರಿದ ನೈಟಿಯನ್ನು ಕೊಟ್ಟಿರುತ್ತೇನೆ. ಸಾಕ್ಷಿ ಮುಂದುವರಿದು ಹರಿದ ನೈಟಿಯನ್ನು ನಾನು ನಮ್ಮ ಮನೆಯ ಅಂಗಳದಲ್ಲಿ ಕೊಟ್ಟಿದ್ದೇನೆಂದು ನುಡಿಯುತ್ತಾರೆ.

ಸಾಕ್ಷಿಗೆ ಸ್ಥಳ ಮಹಜರು ಹಾಗೂ ಸ್ಥಳ ಕರಡು ನಕಾಶೆಯನ್ನು ತೋರಿಸಿದ್ದು ಅವುಗಳಲ್ಲಿರುವ ಸಹಿಗಳನ್ನು ಒಪ್ಪಿದ್ದು ಸದರಿ ದಾಖಲೆಗಳಿಗೆ ಕೃತ್ಯ ನಡೆದ ಸ್ಥಳದಲ್ಲಿ ಸಹಿ ಮಾಡಿದ್ದೇನೆ ಎಂದು ನುಡಿದ ಕಾರಣ ಸದರಿ ದಾಖಲೆಗಳನ್ನು ನಿಪಿ-2 ಮತ್ತು 3 ಎಂದು ಹಾಗೂ ಸದರಿ ದಾಖಲೆಗಳಲ್ಲಿನ ಸಾಕ್ಷಿಯ ಸಹಿಗಳನ್ನು ನಿಪಿ-2 ಎ ಮತ್ತು 3 ಎ ಎಂದು ಗುರುತಿಸಲಾಯಿತು.

ಕೃತ್ಯ ನಡೆದ ಸ್ಥಳದಲ್ಲಿ ಮಹಜನುನ್ನ ಮ 1.30 ರಿಂದ 2.30 ರ ವರೆಗೆ ಮಾಡಿದ್ದಾರೆ. ಆ ಸಮಯದಲ್ಲಿ ಅಬಿಷೇಕ್ ಮತ್ತು ತಿಮ್ಮಯ್ಯ ಹಾಜರಿದ್ದರು.

ಸಾಕ್ಷಿಗೆ 29.12.22 ರ ಮಹಜರು ತೋರಿಸಲಾಗಿ ಅದಕ್ಕೆ ತಾನು ತನ್ನ ಮನೆಯ ಅಂಗಳದಲ್ಲಿ ಸಹಿ ಮಾಡಿದ್ದೇನೆ ಎಂದು ನುಡಿದಿದ್ದು ಅದನ್ನು ನಿಪಿ-4 ಹಾಗೂ ಸಹಿಯನ್ನು 4 ಎ ಎಂದು ಗುರುತಿಸಲಾಯಿತು. ನಿಪಿ-4 ರ ಸಮಯದಲ್ಲಿ ಪೊಲೀಸರು ನನಗೆ ಸೇರಿದ ಹರಿದ ನಸುಕೆಂಪು ಹಾಗೂ ನಸುಕೇಸರಿ ಬಣ್ಣದ ಡಿಸೈನ್ ಇರುವ ನೈಟಿಯನ್ನು ತಮ್ಮ ವಶ ಪಡೆದರು.

ನಾನು ಪೊಲೀಸರಿಗೆ ದೂರು ಕೊಟ್ಟ ನಂತರ ನ್ಯಾಯಾಲಯದಲ್ಲಿ ಹಾಜರಾಗಿ ನ್ಯಾಯಾಧೀಶರ ಸಮ್ಮುಖ ಹೇಳಿಕೆ ಕೊಟ್ಟಿದ್ದೇನೆ. ದೂರು ಕೊಟ್ಟ ನಂತರ ಪೊಲೀಸರು ನನ್ನ ಮರುಹೇಳಿಕೆ ಪಡೆದಿದ್ದಾರೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯಕ್ಕೆ ಆರೋಪಿತರು ಗೈರುಹಾಜರಾಗಿದ್ದು ಅವರ ಗುರುತಿಸುವಿಕೆ ಬಗ್ಗೆ ಆರೋಪಿ ಪರ ವಕೀಲರು ತಮ್ಮ ತಕರಾರು ಇಲ್ಲ ಎಂದು ನುಡಿದಿರುತ್ತಾರೆ.

**CW : 1**

PW : 1

( ಈ ಹಂತದಲ್ಲಿ ಸಾಕ್ಷಿಯ ಮುಂದುವರಿದ ಮುಖ್ಯ ವಿಚಾರಣೆಗಾಗಿ ಸಮಯಾವಕಾಶ ಕೋರಿದ್ದು ನೀಡಲಾಯಿತು)

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.